# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1222 |
| 2 | ಸದಸ್ಯರ ಹೆಸರು | : | ಶ್ರೀ ಪಿ.ಆರ್. ರಮೇಶ್<br>(ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 23–12–2021 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ದೋಬಿಘಾಟ್‌ಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಒಟ್ಟು 19 ದೋಬಿಘಾಟ್‌ಗಳು ಕಾರ್ಯ ನಿರ್ವಹಿಸುತ್ತಿವೆ.<br><br>ಬೆಂಗಳೂರು ನಗರ ವ್ಯಾಪ್ತಿಯಲ್ಲಿರುವ ದೋಬಿಘಾಟ್‌ಗಳ ವಿವರಗಳು ಮತ್ತು ಸೌಲಭ್ಯಗಳ ವಿವರಗಳನ್ನು **ಅನುಬಂಧದಲ್ಲಿ** ನೀಡಿದೆ.<br><br>ವಾರ್ಡ್ ಸಂಖ್ಯೆ: 142 ರಲ್ಲಿನ ಕೆಂಪೇಗೌಡ ನಗರ, ಕೆಂಪಾಂಬುದಿ ಕೆರೆ ಎದುರು ಇರುವ ದೋಬಿಘಾಟ್‌ನ ಅಭಿವೃದ್ಧಿಯ ಕಾಮಗಾರಿಯನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಾಣ ಮತ್ತು ನಿರ್ವಹಣೆಯನ್ನು ಮಾಡಲಾಗುತ್ತಿದೆ. |
| ಆ | ಬೆಂಗಳೂರು ನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ದೋಬಿಘಾಟ್‌ಗಳಲ್ಲಿ ಸರ್ಕಾರದಿಂದ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಲಾಗಿದೆಯೇ: (ವಿವರ ನೀಡುವುದು) ಒದಗಿಸದಿದ್ದಲ್ಲಿ ಸರ್ಕಾರದ ಕ್ರಮವೇನು: (ವಿವರ ನೀಡುವುದು) | |
| ಇ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಾಣವಾಗುತ್ತಿರುವ ಹೊಸ ಬಡಾವಣೆಗಳಲ್ಲಿ ಕಡ್ಡಾಯವಾಗಿ ಬಡಾವಣೆಗೊಂದು ದೋಬಿಘಾಟ್‌ಗಳ ನಿರ್ಮಾಣ ಮಾಡಲು ಸರ್ಕಾರದ ಕ್ರಮವೇನು: (ವಿವರ ನೀಡುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಸರ್ಕಾರದಿಂದ ದಿನಾಂಕ: 25.06.2007 ರಂದು ಅನುಮೋದನೆಯಾಗಿರುವ ಪರಿಷ್ಕೃತ ಮಹಾಯೋಜನೆ–2015 (RMP-2015) ರಲ್ಲಿ ಸಾರ್ವಜನಿಕ/ ಅರೆ ಸಾರ್ವಜನಿಕ (Public & Semi Public) ವಲಯಕ್ಕಾಗಿ ವರ್ಗೀಕರಿಸಲಾದ ಪ್ರದೇಶಗಳಲ್ಲಿ ಸರ್ಕಾರದಿಂದ ಅನುಮೋದಿತ ವಲಯ ನಿಯಮಾವಳಿಯಂತೆ ದೋಬಿಘಾಟ್ ಉದ್ದೇಶಕ್ಕಾಗಿ ಬಳಸಲು ಅವಕಾಶವಿರುತ್ತದೆ. ಆದುದರಿಂದ ಸಾರ್ವಜನಿಕ/ ಅರೆ ಸಾರ್ವಜನಿಕ ವಲಯಕ್ಕಾಗಿ ವರ್ಗೀಕರಿಸಲಾದ ಪ್ರದೇಶಗಳಲ್ಲಿ ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ದೋಬಿಘಾಟ್‌ಗಳನ್ನು ನಿರ್ಮಾಣ ಮಾಡಬಹುದಾಗಿರುತ್ತದೆ.<br><br>ಅದರಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರಚಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ದೋಬಿಘಾಟ್ ನಿರ್ಮಾಣ ಮಾಡಲು ಪರಿಷ್ಕೃತ ಬಡಾವಣೆ ನಕ್ಷೆಯಲ್ಲಿ ಭೀಮನಕುಪ್ಪೆ ಗ್ರಾಮದ ಸರ್ವೆ ನಂ.175 ರಲ್ಲಿ 6469.50 ಚ.ಮೀ ರಷ್ಟು ಪ್ರದೇಶವನ್ನು ಕಾಯ್ದಿರಿಸಲಾಗಿದೆ. |

. . .2/-

| | | |
|---|---|---|
| ಈ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ವಿಶ್ವೇಶ್ವರಯ್ಯ ಬಡಾವಣೆ ಹಾಗೂ ಕೆಂಪೇಗೌಡ ಬಡಾವಣೆಗಳಲ್ಲಿ ದೋಬಿಘಾಟ್ ನಿರ್ಮಾಣ ಮಾಡಲು ಸರ್ಕಾರಕ್ಕೆ ಇರುವ ತೊಡಕುಗಳೇನು? (ವಿವರ ನೀಡುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರಚಿಸಿರುವ ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆಯ 1ನೇ ಬ್ಲಾಕ್ ವ್ಯಾಪ್ತಿಯಲ್ಲಿ 6645.00 ಚದರ ಮೀಟರ್ ವಿಸ್ತೀರ್ಣದ ಜಾಗವನ್ನು ಹಾಗೂ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ದೋಬಿಘಾಟ್ ನಿರ್ಮಾಣ ಮಾಡಲು ಪರಿಷ್ಕೃತ ಬಡಾವಣೆ ನಕ್ಷೆಯಲ್ಲಿ ಭೀಮನಕುಪ್ಪೆ ಗ್ರಾಮದ ಸರ್ವೆ ನಂ.175 ರಲ್ಲಿ 6469.50 ಚ.ಮೀ ಪ್ರದೇಶಗಳನ್ನು ದೋಬಿಘಾಟ್‌ಗಾಗಿ ಕಾಯ್ದಿರಿಸಲಾಗಿರುತ್ತದೆ. |

**ಸಂಖ್ಯೆ: ನಅಇ 378 ಎಂಎನ್‌ವೈ 2021**

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ರಮೇಶ್.ಪಿ.ಆರ್ (ನಾಮ ನಿರ್ದೇಶನ ಹೊಂದಿದವರು) ರವರ ಪ್ರಶ್ನೆ ಸಂಖ್ಯೆ:1222ಕ್ಕೆ ಉತ್ತರಗಳು

ಅನುಬಂಧ-

### ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಧೋಬಿಘಾಟ್‌ಗಳ ವಿವರಗಳು

| ಕ್ರ.ಸಂ | ವಾರ್ಡ್ ಸಂಖ್ಯೆ ಮತ್ತು ಹೆಸರು | ಧೋಬಿಘಾಟ್ ವಿವರ | ಸೌಲಭ್ಯಗಳನ್ನು ಒದಗಿಸಿರುವ ವಿವರ | ಸೌಲಭ್ಯಗಳನ್ನು ಒದಗಿಸದೇ ಇದ್ದಲ್ಲಿ ಕಾರಣ ಹಾಗೂ ಮುಂದಿನ ದಿನಗಳಲ್ಲಿ ಸೌಲಭ್ಯಗಳನ್ನು ಒದಗಿಸುವ ಕ್ರಮಗಳ ವಿವರ | ಷರಾ |
|---|---|---|---|---|---|
| 01 | 02 | 03 | 04 | 05 | 06 |
| | ಪೂರ್ವ ವಲಯ | | | | |
| 1 | 59-ಮಾರುತಿಸೇವಾನಗರ | ದೋಬಿಘಾಟ್ ಲಾಜರ್ ರಸ್ತೆಯ ಮಾರುತಿಸೇವಾನಗರ ವಾರ್ಡ್ ಸಂಖ್ಯೆ-59 | ವಾರ್ಡ್ ಸಂಖ್ಯೆ-59 ರಲ್ಲಿ ದೋಬಿಘಾಟ್ ವಸತಿ ಸಂಜಕೀರ್ಣವನ್ನು ನಿರ್ಮಿಸಲಾಗಿದ್ದು ಒಟ್ಟು 2 ಅಂತಸ್ತಿನ ಕಟ್ಟಡವು ಇದಾಗಿದ್ದು ಸದರಿ ದೋಬಿಘಾಟ್‌ನಲ್ಲಿ ಒಟ್ಟು 48 ಕುಟುಂಬಗಳು ವಾಸವಾಗಿರುವಂತೆ ನಿರ್ಮಿಸಲಾಗಿರುತ್ತದೆ. ಸದರಿ ವಸತಿ ಸಂಕೀರ್ಣದಲ್ಲಿ ವಾಸವಾಗಿರುವ ಕೂಲಿ ಕಾರ್ಮಿಕರಿಗೆ ಬೋರ್ ವೆಲ್ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ಬಟ್ಟೆ ಒಗೆಯುವ ಫ್ಲಾಟ್ ಫಾರಂ, ವಿದ್ಯುತ್ ಸಂಪರ್ಕ ವ್ಯವಸ್ಥೆ, ಹಾಗೂ ಇನ್ನಿತರೆ ವ್ಯವಸ್ಥೆಯನ್ನು ಒದಗಿಸಲಾಗಿದೆ. | - | |
| 2 | 111 ಶಾಂತಲಾನಗರ | ಹಾಸ್‌ಮಟ್ ಆಸ್ಪತ್ರೆ ಎದುರು ಪುಟ್‌ಬಾಲ್ ಸ್ಟೇಡಿಯಂ ಪಕ್ಕ | ಬೋರ್‌ವೆಲ್ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ಐರನ್ ಯಾರ್ಡ್ ವ್ಯವಸ್ಥೆ, ಬಟ್ಟೆ ಒಗೆಯುವ ಫ್ಲಾಟ್‌ಫಾರಂ, ಬಟ್ಟೆ ಒಗೆಯುವ ಯಂತ್ರೋಪಕರಣಗಳು, ವಿದ್ಯುತ್ ಸಂಪರ್ಕ ವ್ಯವಸ್ಥೆ ಹಾಗೂ ಇನ್ನೀತರೆ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ | - | |
| 3 | 116 ನೀಲಸಂದ್ರ | ನಾಯಿದೊಡ್ಡಿ ರಸ್ತೆ, ಎಲ್.ಆರ್.ನಗರ, | ಬೋರ್‌ವೆಲ್ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ಐರನ್ ಯಾರ್ಡ್ ವ್ಯವಸ್ಥೆ, ಬಟ್ಟೆ ಒಗೆಯುವ ಫ್ಲಾಟ್‌ಫಾರಂ, ಬಟ್ಟೆ ಒಗೆಯುವ ಯಂತ್ರೋಪಕರಣಗಳು, ವಿದ್ಯುತ್ ಸಂಪರ್ಕ ವ್ಯವಸ್ಥೆ ಹಾಗೂ ಇನ್ನೀತರೆ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ | - | |
| 4 | 93-ವಸಂತನಗರ | ಕ್ವೀನ್ಸ್ ರಸ್ತೆ ಡೋಬಿಘಾಟ್ | ದಿನಾಂಕ:08-11-2021 ರಂದು ಕರ್ನಾಟಕ ರಾಜ್ಯ ಮಡಿವಾಳರ ಸಂಘ (ರಿ) ರವರಿಂದ ರೂ.3.00 ಕೋಟಿಗಳಿಗೆ ಮೂಲ ಭೂತ ಸೌಕರ್ಯಗಳಿಗಾಗಿ ಮನವಿ ನೀಡಿರುತ್ತಾರೆ. | ಸದರಿ ಪ್ರಸ್ತಾವನೆಯ ಬಗ್ಗೆ ಅಂದಾಜು ಪಟ್ಟಿ ತಯಾರಿಸಿ ಅನುಮೋದನೆಗಾಗಿ ಕ್ರಮಕೈಗೊಳ್ಳಲಾಗುತ್ತಿರುತ್ತದೆ. | |

| ಕ್ರ.ಸಂ | ವಾರ್ಡ್ ಸಂಖ್ಯೆ ಮತ್ತು ಹೆಸರು | ಧೋಬಿಘಾಟ್ ವಿವರ | ಸೌಲಭ್ಯಗಳನ್ನು ಒದಗಿಸಿರುವ ವಿವರ | ಸೌಲಭ್ಯಗಳನ್ನು ಒದಗಿಸದೇ ಇದ್ದಲ್ಲಿ ಕಾರಣ ಹಾಗೂ ಮುಂದಿನ ದಿನಗಳಲ್ಲಿ ಸೌಲಭ್ಯಗಳನ್ನು ಒದಗಿಸುವ ಕ್ರಮಗಳ ವಿವರ | ಷರಾ |
|---|---|---|---|---|---|
| | ಪಶ್ಚಿಮ ವಲಯ | | | | |
| 5 | 65, ಮಲ್ಲೇಶ್ವರಂ | ವಾರ್ಡ್ ಸಂಖ್ಯೆ 65 ರ ಮಲ್ಲೇಶ್ವರಂ, ಐ.ಪಿ.ಪಿ ಕೇಂದ್ರ ಕಛೇರಿ ಹತ್ತಿರದಲ್ಲಿರುವ ಧೋಬಿಘಾಟ್ | ವಾಷರ್ಸ್ ಮತ್ತು ಹೈಡ್ರೊ ಎಕ್ಸ್‌ಟ್ರಾಕ್ಟರ್ ಗಳನ್ನು ಒದಗಿಸಲಾಗಿದೆ. | - | |
| 6 | 107, ಶಿವನಗರ | ವಾರ್ಡ್ ಸಂಖ್ಯೆ 107 ರ ಶಿವನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆ ಹತ್ತಿರದಲ್ಲಿರುವ ಧೋಬಿಘಾಟ್ | ಬೋರ್‌ವೆಲ್ ವ್ಯವಸ್ಥೆ, ಕುಡಿಯುವ ನೀರಿನಘಟಕದ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ಬಟ್ಟೆ ಒಗೆಯುವ ಫ್ಲಾಟ್‌ಫಾರಂ, ವಿದ್ಯುತ್ ಸಂಪರ್ಕ, ಆಟೋಮೆಟಿಕ್ ವಾಷಿಂಗ್ ಯಂತ್ರ ಮತ್ತು ಕೊಠಡಿಗಳನ್ನು ನಿರ್ಮಿಸಿ ವಾಟರ್ ಟ್ಯಾಂಕ್, ಕಾಂಪೌಂಡ್ ವಾಲ್, ಕಾಂಕ್ರೀಟ್ ರಸ್ತೆ, ಮಳೆ ನೀರಿನ ಇಂಗು ಗುಂಡಿಗಳು ಮತ್ತು ಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. | - | |
| 7 | 67, ನಾಗಪುರ | ವಾರ್ಡ್ ಸಂಖ್ಯೆ 67 ರ ಇಸ್ಕಾನ್ ಬಳಿಯ ರಾಜಾಜಿನಗರ 1ನೇ ಆರ್ ಬ್ಲಾಕ್‌ನಲ್ಲಿರುವ ಧೋಬಿಘಾಟ್ | ಬೋರ್‌ವೆಲ್ ವ್ಯವಸ್ಥೆ, ಕುಡಿಯುವ ನೀರಿನಘಟಕದ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ಬಟ್ಟೆ ಒಗೆಯುವ ಫ್ಲಾಟ್‌ಫಾರಂ, ವಿದ್ಯುತ್ ಸಂಪರ್ಕ, ದೀಪ ಹಾಗೂ ರಸ್ತೆ ಚರಂಡಿ ವ್ಯವಸ್ಥೆ, ಸ್ವಯಂಚಾಲಿತ ಬಟ್ಟೆ ಸುಚಿಗೊಳಿಸುವ ಯಂತ್ರ ಮತ್ತು ಕೊಠಡಿ. | - | |
| | ದಕ್ಷಿಣ ವಲಯ | | | | |
| 8 | ವಾರ್ಡ್ ನಂ. 165 ಗಣೇಶ ಮಂದಿರ | ಗಣೇಶ ಮಂದಿರ ದೋಬಿಘಾಟ್, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು | ದೋಬಿಗಳಿಗೆ 28 ಮನೆಗಳನ್ನು ನಿರ್ಮಿಸಲಾಗಿದ್ದು, ಉಳಿಕೆ 24 ಮನೆಗಳ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತದೆ. ಸದರಿ ಘಾಟ್‌ನಲ್ಲಿ 2 ಬೋರ್‌ವೆಲ್‌ಗಳ ವ್ಯವಸ್ಥೆ, ಕುಡಿಯವ ನೀರಿನ ವ್ಯವಸ್ಥೆ, ಶೌಚಾಲಯ, ಬಟ್ಟೆ ಒಗೆಯುವ ಫ್ಲಾಟ್ ಫಾರಂಗಳು, ವಿದ್ಯುತ್ ಸಂಪರ್ಕ ವ್ಯವಸ್ಥೆಗಳನ್ನು ಈಗಾಗಲೇ ಕಲ್ಪಿಸಲಾಗಿರುತ್ತದೆ. ಸದರಿ ದೋಬಿ ಘಾಟ್‌ನಲ್ಲಿ ರಸ್ತೆ ನಿರ್ಮಾಣ ಮಾಡಲಾಗಿರುತ್ತದೆ. | - | |
| 9 | ವಾರ್ಡ್ ನಂ. 182 ಪದ್ಮನಾಭನಗರ | 15ನೇ ಅಡ್ಡರಸ್ತೆ, 7ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು | ಸದರಿ ಘಾಟ್‌ನಲ್ಲಿ 2 ಬೋರ್‌ವೆಲ್‌ಗಳ ವ್ಯವಸ್ಥೆ, ಕುಡಿಯವ ನೀರಿನ ವ್ಯವಸ್ಥೆ, ಶೌಚಾಲಯ, ಬಟ್ಟೆ ಒಗೆಯುವ ಫ್ಲಾಟ್ ಫಾರಂಗಳು, ರಸ್ತೆ ನಿರ್ಮಾಣ, ವಿದ್ಯುತ್ ಸಂಪರ್ಕ ವ್ಯವಸ್ಥೆಗಳನ್ನು ಕಲ್ಪಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. | - | |

| ಕ್ರಸಂ | ವಾರ್ಡ್ ಸಂಖ್ಯೆ ಮತ್ತು ಹೆಸರು | ಧೋಬಿಘಾಟ್ ವಿವರ | ಸೌಲಭ್ಯಗಳನ್ನು ಒದಗಿಸಿರುವ ವಿವರ | ಸೌಲಭ್ಯಗಳನ್ನು ಒದಗಿಸದೇ ಇದ್ದಲ್ಲಿ ಕಾರಣ ಹಾಗೂ ಮುಂದಿನ ದಿನಗಳಲ್ಲಿ ಸೌಲಭ್ಯಗಳನ್ನು ಒದಗಿಸುವ ಕ್ರಮಗಳ ವಿವರ | ಷರಾ |
|---|---|---|---|---|---|
| 10 | ವಾರ್ಡ್ ನಂ. 142 ಸುಂಕೇನಹಳ್ಳಿ | ಕೆಂಪೇಗೌಡನಗರ, ಕೆಂಪಾಂಬುದಿ ಕೆರೆ ಎದುರು. | ಸದರಿ ಧೋಬಿಘಾಟ್‌ನ ಅಭಿವೃದ್ಧಿಯ ಕಾಮಗಾರಿಯನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಾಣ ಮತ್ತು ನಿರ್ವಹಣೆಯನ್ನು ಮಾಡಲಾಗುತ್ತಿರುವುದರಿಂದ, ಸದರಿ ಮಾಹಿತಿಯನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ರವರಿಂದ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. | - | |
| 11 | ವಾರ್ಡ್ ನಂ. 155 ಹನುಮಂತನಗರ | ಜಿಂಕೆ ಉದ್ಯಾನವನದ ಹತ್ತಿರವಿರುವ ಧೋಬಿಘಾಟ್, ಹನುಮಂತನಗರ, ಬೆಂಗಳೂರು | 1. ಸದರಿ ಧೋಬಿಘಾಟ್‌ನಲ್ಲಿ ಐರನ್ ಯಾರ್ಡ್ ವ್ಯವಸ್ಥೆ, ಬಟ್ಟೆ ಒಗೆಯುವ ಫ್ಲಾಟ್‌ಫಾರಂ, ಬಟ್ಟೆ ಒಗೆಯುವ ಯಂತ್ರೋಪಕರಣಗಳು, ವಿದ್ಯುತ್ ಸಂಪರ್ಕ ವ್ಯವಸ್ಥೆಗಳು ಹಾಲಿ ಇದ್ದು, ಧೋಬಿಘಾಟ್ಟನ್ನು ಉನ್ನತೀಕರಣಗೊಳಿಸಲು ಸರ್ಕಾರದ ನಗರೋತ್ಥಾನದ 2019-20ನೇ ಸಾಲಿನ ಅನುದಾನದಲ್ಲಿ ಬಟ್ಟೆ ಒಗೆಯುವ ಜಾಗದ' ಹಾಳಾಗಿರುವ ಪ್ಲಾಟ್‌ಪಾರಂನ ದುರಸ್ಥಿ ಕಾರ್ಯ ಹಾಗೂ ಚರಂಡಿ ಅಭಿವೃದ್ಧಿ, ನೀರಿನ ತೊಟ್ಟಿ ಹಾಗೂ ಮೇಲ್ಛಾವಣಿ (Tensile roofing) ಮತ್ತು ಒಂದು ಬೋರ್‌ವೆಲ್‌ನ ವ್ಯವಸ್ಥೆಯ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>2. ಬಿಬಿಎಂಪಿ ಅನುದಾನದಲ್ಲಿ ಸದರಿ ಧೋಬಿಘಾಟ್‌ನ ಜನರ ಅನುಕೂಲಕ್ಕಾಗಿ ಸಮುದಾಯ ಭವನವನ್ನು ನಿರ್ಮಿಸಲು ಕಾರ್ಯಾದೇಶವನ್ನು ಈಗಾಗಲೇ ನೀಡಲಾಗಿರುತ್ತದೆ. | - | |
| | ಬೊಮ್ಮನಹಳ್ಳಿ ವಲಯ | | | | |
| 12 | 196 - ಅಂಜನಾಪುರ | ಸರ್ವೆ ನಂ.59/2, ಗೊಲ್ಲಹಳ್ಳಿ, ವಾರ್ಡ್ ಸಂಖ್ಯೆ: 196- ಅಂಜನಾಪುರ . | 1. ಚೈನ್‌ಲಿಂಕ್ ಫೇನ್ಸಿಂಗ್, 2. ಕುಡಿಯುವ ನೀರಿನ ವ್ಯವಸ್ಥೆಗಾಗಿ ಬೋರ್‌ವೆಲ್, 3. ರಸ್ತೆ ಕಾಮಗಾರಿ.<br>4. ಶೌಚಾಲಯದ ವ್ಯವಸ್ಥೆ, 5. ಐರನ್ ಯಾರ್ಡ್ ವ್ಯವಸ್ಥೆ, 6. ಬಟ್ಟೆ ಒಗೆಯುವ ಫ್ಲಾಟ್‌ಫಾರಂ<br>7. ವಿದ್ಯುತ್ ಸಂಪರ್ಕ ವ್ಯವಸ್ಥೆ, 8. ಕಟಡ ಕಾಮಗಾರಿ ಇತ್ಯಾದಿ. | - | |
| | ದಾಸರಹಳ್ಳಿ ವಲಯ | | | | |
| 13 | 13-ಮಲ್ಲಸಂದ್ರ | ಸರ್ವೆ ನಂ:13, ಮಲ್ಲಸಂದ್ರ | ಬೋರ್‌ವೆಲ್ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ಐರನ್ ಯಾರ್ಡ್ ವ್ಯವಸ್ಥೆ, ಬಟ್ಟೆ ಒಗೆಯುವ ಫ್ಲಾಟ್‌ಫಾರಂ, ಬಟ್ಟೆ ಒಗೆಯುವ ಯಂತ್ರೋಪಕರಣಗಳು, ವಿದ್ಯುತ್ ಸಂಪರ್ಕ ವ್ಯವಸ್ಥೆಗಳನ್ನು ಒದಗಿಸಲಾಗಿರುತ್ತದೆ. | - | |

| ಕ್ರ.ಸಂ | ವಾರ್ಡ್ ಸಂಖ್ಯೆ ಮತ್ತು ಹೆಸರು | ಧೋಬಿಘಾಟ್ ವಿವರ | ಸೌಲಭ್ಯಗಳನ್ನು ಒದಗಿಸಿರುವ ವಿವರ | ಸೌಲಭ್ಯಗಳನ್ನು ಒದಗಿಸದೇ ಇದ್ದಲ್ಲಿ ಕಾರಣ ಹಾಗೂ ಮುಂದಿನ ದಿನಗಳಲ್ಲಿ ಸೌಲಭ್ಯಗಳನ್ನು ಒದಗಿಸುವ ಕ್ರಮಗಳ ವಿವರ | ಷರಾ |
|---|---|---|---|---|---|
| | ಮಹದೇವಪುರ ವಲಯ | | | | |
| 14 | 53–ಬಸವನಪುರ | ಬಸವನಪುರ ಧೊಬಿಘಾಟ್ | ಬೋರ್‌ವೆಲ್ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ಐರನ್ ಯಾರ್ಡ್ ವ್ಯವಸ್ಥೆ, ಬಟ್ಟೆ ಒಗೆಯುವ ಫ್ಲಾಟ್‌ಫಾರಂ, ವ್ಯವಸ್ಥೆ ಇರುತ್ತದೆ. | ಯಂತ್ರೋಪಕರಣಗಳು, ವಿದ್ಯುತ್ ಸಂಪರ್ಕ ವ್ಯವಸ್ಥೆ ಹಾಗೂ ಇನ್ನಿತರೆ ವ್ಯವಸ್ಥೆಯನ್ನು ಕಲ್ಪಿಸಲು ವಿಸ್ತೃತವಾದ ಅಂದಾಜು ಪಟ್ಟಿಯನ್ನು ತಯಾರಿಸಿ ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. | |
| | ರಾಜರಾಜೇಶ್ವರಿನಗರ ವಲಯ | | | | |
| 15 | 40-Doddabidarakallu | Sy no 75 of Thippenahalli | ಕಟ್ಟಡವನ್ನು ನಿರ್ಮಿಸಲಾಗಿದ್ದು, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಮಾಡಲಾಗಿರುತ್ತದೆ. | - | |
| 16 | 73-Kottigepalya | Nagarabavi dobhighat | ಕಟ್ಟಡವನ್ನು ನಿರ್ಮಿಸಲಾಗಿದ್ದು, ಬಟ್ಟೆ ಒಗೆಯುವ ಯಂತ್ರೋಪಕರಣಗಳನ್ನು ನೀಡಿ ಕಟ್ಟಡ ಪೂರ್ಣಗೊಂಡ ನಂತರ ಧೋಬಿ ಘಾಟ್ ಸಂಘದವರಿಗೆ ಹಸ್ತಾಂತರಿಸಲಾಗಿದೆ. | - | |
| | ಯಲಹಂಕ ವಲಯ | | | | |
| 17 | ಕೆಂಪೇಗೌಡ ವಾರ್ಡ್ ನಂ:01 | ಯಲಹಂಕ ಕೆರೆ ಆವರಣದಲ್ಲಿ | ಬೋರ್‌ವೆಲ್, ಮೋಟಾರ್, ಸಂಪ್, ವಿದ್ಯುತ್ ಸಂಪರ್ಕ ಒದಗಿಸಲಾಗಿದೆ | - | |
| 18 | ಅಟ್ಟೂರು ವಾರ್ಡ್ ನಂ:03 | ಅನಂತಪುರ ದೋಬಿಘಾಟ್ | ನೀರಿನ ತೊಟ್ಟಿಗಳು, ಬೋರ್‌ವೆಲ್, ಮೋಟಾರ್, ಸಂಪ್, ವಿದ್ಯುತ್ ಸಂಪರ್ಕ, ಶೌಚಾಲಯಗಳು, ಬಟ್ಟೆ ಒಣಗಿಸಲು ಶೆಡ್, ಸಂಪರ್ಕ ರಸ್ತೆ (ಸಿಮೆಂಟ್ ಕಾಂಕ್ರೀಟ್ ರಸ್ತೆ), ಬಟ್ಟೆ ಒಗೆಯುವ ಪ್ಲಾಟ್‌ಪಾರಂ ಕುಡಿಯುವ ನೀರಿನ ವ್ಯವಸ್ಥೆ | - | |
| 19 | ಕುವೆಂಪುನಗರ ವಾರ್ಡ್ ನಂ–11 | ವರದರಾಜನಗರ, ರಾಜಕಾಲುವೆ ಪಕ್ಕ | ಬೋರ್‌ವೆಲ್, ಮೋಟಾರ್, ಸಂಪ್, ವಿದ್ಯುತ್ ಸಂಪರ್ಕ, ಶೌಚಾಲಯಗಳು, ಬಟ್ಟೆ ಒಣಗಿಸಲು ಶೆಡ್, ನೀರಿನ ತೊಟ್ಟಿಗಳು | - | |